# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.2973/2016/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:22.6.2017.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯು:-** ಕುಣಿಗಲ್ ತಾಲ್ಲೂಕು ಚಿಕ್ಕಮಾವತೂರು ಗ್ರಾಮದ ಸರ್ವೆ ನಂ.127ರ ಸರ್ಕಾರಿ ಗೋಮಾಳ ಜಮೀನಿನಲ್ಲಿ ಸಿ.ಕೆ.ಸೊಬಗಯ್ಯ ಎಂಬುವವರಿಗೆ ಮಂಜೂರಾದ 1.10 ಎಕರೆ ಜಮೀನನ್ನು 2.10 ಎಕರೆ ಎಂದು ಅಕ್ರಮವಾಗಿ ತಿದ್ದುಪಡಿ ಮಾಡಿಕೊಂಡಿರುವುದರಿಂದ ಆತನಿಗೆ ಮಂಜೂರಾದ ಸರ್ವೆ ನಂ.127ರ ಸಂಪೂರ್ಣ ಜಮೀನನ್ನು ಕಾನೂನುಪ್ರಕಾರ ರದ್ದುಗೊಳಿಸಿ ಪುನ: ಸರ್ಕಾರದ ಸ್ವಾಧೀನಕ್ಕೆ ಪಡೆಯಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡುವ ಬಗ್ಗೆ.

*******

ಶ್ರೀ ಐ.ಜಿ.ಸತೀಶ್, ತಂದೆ ಲೇಟ್ ಗಂಗಾಧರಯ್ಯ, ಇಪ್ಪಾಡಿ ಗ್ರಾಮದ ನಿವಾಸಿ, ಕುಣಿಗಲ್ ತಾಲ್ಲೂಕು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ರಮೇಶ್, ತಹಶೀಲ್ದಾರ್,(2) ಶ್ರೀ ನರಸೇಗೌಡ, ತಾಲ್ಲೂಕು ಸರ್ವೆಯರ್, ಮತ್ತು (3) ಶ್ರೀ ರಾಜಗೋಪಾಲ್, ತಾಲ್ಲೂಕು ಸರ್ವೆಯರ್, ಕುಣಿಗಲ್ ತಾಲ್ಲೂಕು ಕಛೇರಿ, (ಇನ್ನು ಮುಂದೆ ಕ್ರಮವಾಗಿ 1ರಿಂದ 3ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ಕುಣಿಗಲ್ ತಾಲ್ಲೂಕು ಚಿಕ್ಕಮಾವತೂರು ಗ್ರಾಮದ ಸರ್ವೆ ನಂ.127 ಜಮೀನು ನೂರಾರು ಎಕರೆ ಸರ್ಕಾರಿ ಗೋಮಾಳ ಜಮೀನಾಗಿರುತ್ತದೆ. ಇದರಲ್ಲಿ ಕೆಲವು ರೈತಾಪಿ ವರ್ಗದ ಜನರಿಗೆ ಸರ್ಕಾರವು ಜಮೀನು ಮಂಜೂರು ಮಾಡಿರುತ್ತದೆ. ಆ ಪ್ರಕಾರ ಗ್ರಾಮದ ಸಿ.ಕೆ.ಸೊಬಗಯ್ಯನವರಿಗೆ ಎಲ್.ಎನ್.ಡಿ.ಆರ್. ಯುಸಿ(ಹೆಚ್.ಎಲ್.ಡಿ) 91-92ರಂತೆ 1.10 ಎಕರೆ

ಜಮೀನು ಮಂಜೂರಾಗಿರುತ್ತದೆ. ಆದರೆ ಆತನು 1.10 ಬದಲಾಗಿ 2.10 ಎಕರೆ ಎಂದು ಸರ್ಕಾರಿ ದಾಖಲೆಗಳನ್ನು ತಿದ್ದಿರುತ್ತಾನೆ. ಆ ಪ್ರಕಾರ ಪಹಣಿಯಲ್ಲಿ 2.10 ಎಕರೆ ದಾಖಲಾಗಿರುತ್ತದೆ. ಈ ಬಗ್ಗೆ ದೂರು ನೀಡಿದಾಗ ಸಿ.ಕೆ.ಸೊಬಗಯ್ಯನು ಅಕ್ರಮವಾಗಿ ದಾಖಲೆಗಳನ್ನು ತಿದ್ದಿದ್ದು ದೃಢಪಟ್ಟ ಕಾರಣ ಆತನ ವಿರುದ್ಧ ಕಂದಾಯ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಲಾಗಿದೆ. ಸಿ.ಕೆ.ಸೊಬಗಯ್ಯನು ಸರ್ವೆ ನಂ.127/ಪಿ20ರಲ್ಲಿ 2 ಎಕರೆ ತನ್ನ ಹೆಸರಿಗೆ, 2 ಎಕರೆ ತನ್ನ ತಮ್ಮ ಸಿ.ಕೆ.ವೈಕುಂಠಯ್ಯನ ಹೆಸರಿಗೆ ಹಾಗೂ ಸರ್ವೆ ನಂ.127/ಪಿ.3 ತನ್ನ ತಂದೆಯ ಹೆಸರಿಗೆ ಕ್ರಯ ಎಂದು 1 ಎಕರೆ ಹಾಗೂ ತನ್ನ ಹೆಂಡತಿ ಸಿಹೆಚ್.ಜಯಮ್ಮನ ಹೆಸರಿನಲ್ಲಿ ವಿಭಾಗ ಎಂದು 3 ಎಕರೆ ಜಮೀನನ್ನು ಸೃಷ್ಟಿಸಿಕೊಂಡು ಸರ್ಕಾರದ ಒಟ್ಟು 8 ಎಕರೆ ಜಮೀನು ಲಪಟಾಯಿಸಿರುತ್ತಾರೆ. ಅದರ ಜೊತೆಗೆ 20 ಎಕರೆ ಜಮೀನನ್ನು ಅಕ್ರಮವಾಗಿ ಅನುಭವಿಸುತ್ತಿದ್ದಾನೆ. ಈ ರೀತಿ ಜಮೀನಿನ ದಾಖಲೆಗಳನ್ನು ತಿದ್ದಿ ಅಕ್ರಮಕ್ಕೆ ಎದುರುದಾರರು ನೆರವಾಗಿದ್ದು, ಆದ್ದರಿಂದ ಈ ಬಗ್ಗೆ ತನಿಖೆ ಮಾಡಿ ಎದುರುದಾರರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

3. 1ರಿಂದ 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸರ್ವೆ ನಂ.127 ಸರ್ಕಾರಿ ಗೋಮಾಳ ಜಮೀನಾಗಿದ್ದು, ನಮೂನೆ 50ರಲ್ಲಿ ಸುಮಾರು 68 ಜನರು ಬಗರ್‌ಹುಕುಂ ಯೋಜನೆಯಡಿ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿದ್ದು, ಅದು ಎಲ್.ಎನ್.ಡಿ.(ಆರ್.ಯುಸಿ) ಸಿ.ಆರ್.29/91–92ರಂತೆ ಅಂದಿನ ಕಂದಾಯ ನಿರೀಕ್ಷಕರಿಂದ ವರದಿ ಪಡೆದು ದಿ.20.6.2002ರಂದು ನಡೆದ ಸಭೆಯಲ್ಲಿ 46 ಅರ್ಜಿಗಳಿಗೆ ಮಂಜೂರಾತಿ ನೀಡಿ ಇನ್ನುಳಿದ ಅರ್ಜಿಗಳನ್ನು ವಜಾ ಮಾಡಲಾಗಿರುತ್ತದೆ. ಈ 46 ಜನರ ಪೈಕಿ ಸಿ.ಕೆ.ಸೊಬಗಯ್ಯ ಇವರಿಗೆ 127/48ರಲ್ಲಿ 1.10 ಎಕರೆ ಜಮೀನು ಮಂಜೂರಾಗಿದ್ದು, ಸಾಗುವಳಿ ಚೀಟಿ ನೀಡಲಾಗಿರುತ್ತದೆ.

4. ಇಪ್ಪಾಡಿ ಗ್ರಾಮದ ಸ.282 ಸರ್ಕಾರಿ ಗೋಮಾಳ ಜಮೀನಾಗಿದ್ದು, ನಮೂನೆ 53ರಲ್ಲಿ ಬಗರ್ ಹುಕುಂ ಮಂಜೂರಾತಿ ಕೋರಿ ಎಲ್.ಎನ್.ಡಿ.(ಆರ್.ಯುಸಿ) ಹೆಚ್.ಟಿ.ಆರ್/ಸಿ.ಆರ್.207/99–99ರಂತೆ ಅಂದಿನ ಕಂದಾಯ ನಿರೀಕ್ಷಕರಿಂದ ವರದಿ ಪಡೆದು ದಿ.20.5.2002ರಂದು ನಡೆದ ಸಭೆಯಲ್ಲಿ 87 ಅರ್ಜಿಗಳಿಗೆ ಮಂಜೂರಾತಿ ಮಾಡಲಾಗಿರುತ್ತದೆ. ಇದರಲ್ಲಿ ದೂರುದಾರರ ತಾಯಿ ಶ್ರೀಮತಿ

ನಾಗಮ್ಮನವರಿಗೆ ಸರ್ವೆ ನಂ.282/63ರಲ್ಲಿ 1.30 ಎಕರೆ ಜಮೀನು ಮಂಜೂರಾಗಿದ್ದು ಸಾಗುವಳಿ ಚೀಟಿ ನೀಡಲಾಗಿದೆ.

5. ದೂರುದಾರರು ಎದುರುದಾರರ ಕಛೇರಿಗೆ ಅರ್ಜಿ ಸಲ್ಲಿಸಿ ಸರ್ವೆ ನಂ.282/63 ಕ್ಷೇತ್ರ 1.30 ಎಕರೆ ಜಮೀನು ದರಕಾಸ್ತು ಮೂಲಕ ಬಂದಿದ್ದು, 30 ವರ್ಷಗಳಿಂದ ಅನುಭವದಲ್ಲಿರುವುದಾಗಿ ತಿಳಿಸಿರುತ್ತಾರೆ. ಆದರೆ ಈ ಜಮೀನು ತನ್ನ ಸ್ವಾಧೀನಾನುಭವದಲ್ಲಿರುವುದಾಗಿ ಸಿ.ಕೆ.ಸೊಬಗಯ್ಯನವರು ದೂರುದಾರರ ಉಳಿಮೆಗೆ ತೊಂದರೆ ನೀಡುತ್ತಿದ್ದಾರೆಂದು ತನಗೆ ಸೂಕ್ತ ರಕ್ಷಣೆ ನೀಡುವಂತೆ ಮನವಿ ಮಾಡಿಕೊಂಡಿದ್ದರು. ಆಗ ಸ್ಥಳ ತನಿಖೆ ಮಾಡಿ ದೂರುದಾರರ ಜಮೀನು, ನಕ್ಷೆ, ಹಾಗೂ ಸಾಗುವಳಿ ಚೀಟಿಯಲ್ಲಿನ ಸರ್ವೆ ನಂಬರಿಗೆ ತಾಳೆ ಇರುವುದು ಕಂಡುಬಂದಿರುತ್ತದೆ. ಆದರೆ ದೂರುದಾರರು ಯಾವ ಸರ್ವೆ ನಂಬರಿನಲ್ಲಿ ಇದೆ ಎನ್ನುವ ಬಗ್ಗೆ ಸ್ಪಷ್ಟವರದಿ ಅವಶ್ಯಕವಿದ್ದು, ಅದಕ್ಕೆ ಮೋಜಣಿದಾರರಿಂದ ತಾಂತ್ರಿಕ ವರದಿ ಬೇಕಾಗಿರುತ್ತದೆ. ಸರ್ವೆ ನಂ.127 ಎರಡು ಗ್ರಾಮಗಳ ಗಡಿಪ್ರದೇಶವಾಗಿದ್ದು ದಟ್ಟ ಕಾಡು ಇರುವುದರಿಂದ 4 ಜನ ಸರ್ವೆಯರ್‌ಗಳ ಅವಶ್ಯಕತೆ ಇರುವುದರಿಂದ ಈ ಕೆಲಸಕ್ಕೆ ಭೂಮಾಪಕರನ್ನು ನೇಮಿಸಲಾಗಿದೆ. ಅದೇ ರೀತಿ ಐ.ಜಿ.ಸತೀಶ್ ಅವರು 1.10 ಎಕರೆ ಜಮೀನನ್ನು 2.10 ಎಂದು ಅಕ್ರಮವಾಗಿ ತಿದ್ದುಪಡಿ ಮಾಡಿದ್ದಾರೆಂದು ದೂರುದಾರರು ಅರ್ಜಿ ಸಲ್ಲಿಸಿದ ಕಾರಣ ಸ್ಥಳತನಿಖೆ ಮಾಡಿ ಉಪವಿಭಾಗಾಧಿಕಾರಿಗಳಿಗೆ ವಾಸ್ತವಾಂಶಗಳ ವರದಿ ನೀಡಲಾಗಿರುತ್ತದೆ. ಸಿ.ಕೆ.ಸೊಬಗಯ್ಯನು ಅಕ್ರಮವಾಗಿ ದಾಖಲೆಗಳನ್ನು ತಿದ್ದಿರುವುದರಿಂದ ಆತನ ವಿರುದ್ದ ಕಂದಾಯ ಹಾಗೂ ಕ್ರಿಮಿನಲ್ ಮೊಕದ್ದಮೆಗಳನ್ನು ಧಾಖಲಿಸಲಾಗಿದೆ. ಆದರೆ ಸಿ.ಕೆ. ಸೊಬಗಯ್ಯನಿಗೆ ಮಂಜೂರಾದ ಒಟ್ಟು ಜಮೀನನ್ನು ರದ್ದುಗೊಳಿಸಬೇಕೆ ಅಥವಾ ಅಕ್ರಮವಾಗಿ ತಿದ್ದುಪಡಿಮಾಡಿಕೊಂಡ 1.10 ಎಕರೆ ಮಾತ್ರ ರದ್ದುಪಡಿಸಬೇಕೆ ಎನ್ನುವ ಬಗ್ಗೆ ಸೂಕ್ತ ಆದೇಶ ಕೋರಿ ಉಪವಿಭಾಗಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

6. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ.

ದೂರುದಾರರು ಸಲ್ಲಿಸಿದ ದೂರು ಆಕ್ಷೇಪಣೆ, ಪ್ರತ್ಯುತ್ತರ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, ದೂರುದಾರರಿಗೆ ಸರ್ವೆ ನಂ.127ರಲ್ಲಿ ಜಮೀನು ಮಂಜೂರಾಗಿದ್ದು, ಅವರು ಅವರ ದಾಖಲೆಗಳು ಹಾಗೂ ಸರ್ವೆ ನಂಬರ್ ತಾಳೆಯಾಗುತ್ತದೆಂದು ಅಭಿಪ್ರಾಯಪಟ್ಟಿರುತ್ತಾರೆ. ಆದರೆ ಇದೇ ಜಮೀನನ್ನು ಸಿಕೆ ಸೊಬಗಯ್ಯನು ತನ್ನದೆಂದು ಗಲಾಟೆ ಮಾಡಿದಾಗ ದೂರುದಾರರು ತನಗೆ ರಕ್ಷಣೆ ನೀಡಬೇಕೆಂದು ಹಾಗೂ ಸಿಕೆ ಸೊಬಗಯ್ಯನು ಅಕ್ರಮವಾಗಿ ದಾಖಲೆಗಳನ್ನು ತಿದ್ದಿ, 1.10 ಇರುವ ಜಮೀನನ್ನು 2.10 ಎಕರೆ ಎಂದು ನಮೂದಿಸಿರುವ ಬಗ್ಗೆ ಕ್ರಮಕೈಗೊಳ್ಳಬೇಕೆಂದು ಎದುರುದಾರರಿಗೆ ಅರ್ಜಿ ಸಲ್ಲಿಸಿ ಮನವಿಮಾಡಿಕೊಂಡಿದ್ದಾನೆಂದು ಎದುರುದಾರರು ಒಪ್ಪಿಕೊಂಡಿರುತ್ತಾರೆ.

7. 1ನೇ ಎದುರುದಾರರು ಉಪವಿಭಾಗಾಧಿಕಾರಿಗಳ ಆದೇಶದ ಮೇರೆಗೆ ಸಿ.ಕೆ.ಸೊಬಗಯ್ಯನಿಗೆ ನೀಡಿದ ಜಮೀನಿನ ದಾಖಲೆಗಳನ್ನು ಪರಿಶೀಲಿಸಿದಾಗ ಆತನು ಜಮೀನಿನ ಕ್ಷೇತ್ರವನ್ನು ಅಕ್ರಮವಾಗಿ ತಿದ್ದುಪಡಿ ಮಾಡಿಕೊಂಡಿರುವುದು ದೃಢಪಟ್ಟಿರುತ್ತದೆಂದು ಅಭಿಪ್ರಾಯಪಟ್ಟಿರುತ್ತಾರೆ. ಆಗ ಸಿಕೆ ಸೊಬಗಯ್ಯನ ವಿರುದ್ಧ ಕರ್ನಾಟಕ ಭೂಕಂದಾಯ ನಿಯಮ 1969 ನಿಯಮ 25ರಡಿ ಮಂಜೂರಾತಿ ರದ್ದುಪಡಿಸಲು ಕಾನೂನು ರೀತ್ಯಾ ಕ್ರಮಕೈಗೊಳ್ಳುವಂತೆ ಉಪವಿಭಾಗಾಧಿಕಾರಿಗಳು ನಿರ್ದೇಶನ ನೀಡಿರುತ್ತಾರೆ. ಅಲ್ಲದೆ ಸಿ.ಕೆ. ಸೊಬಗಯ್ಯನ ವಿರುದ್ಧ ಕ್ರಿಮಿನಲ್ ಪ್ರಕರಣವನ್ನು ಸಹ ದಾಖಲಿಸಲು 1ನೇ ಎದುರುದಾರರಿಗೆ ನಿರ್ದೇಶನ ನೀಡಲಾಗಿರುತ್ತದೆ.

8. ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಾಗ ದೂರುದಾರರು ತಮಗೆ ಮಂಜೂರಾದ ಜಮೀನಿನಲ್ಲಿ ಸಾಗುವಳಿ ಮಾಡಿಕೊಂಡು ಸ್ವಾಧೀನದಲ್ಲಿರುವಾಗ ಸೊಬಗಯ್ಯ ಅಕ್ರಮವಾಗಿ ಆತನ ಜಮೀನಿನಲ್ಲಿ ಪ್ರವೇಶಿಸಿ ಅದು ತನ್ನದೆಂದು ತಂಟೆ ಮಾಡುತ್ತಾನೆಂದು ದೂರುದಾರರು ದೂರಿನಲ್ಲಿ ಉಲ್ಲೇಖಿಸಿರುತ್ತಾರೆ. ಸಿ.ಕೆ.ಸೊಬಗಯ್ಯನು ಅಕ್ರಮವಾಗಿ ಸರ್ವೆ ನಂ.127ರಲ್ಲಿ ತನಗೆ ಮಂಜೂರಾದ 1.10 ಎಕರೆ ಜಮೀನನ್ನು 2.10 ಎಕರೆ ಎಂದು ಅಕ್ರಮವಾಗಿ ತಿದ್ದುಪಡಿ ಮಾಡಿಕೊಂಡಿರುವುದು ಈಗಾಗಲೇ ದೃಢಪಟ್ಟಿರುವುದರಿಂದ ಈತನು ಸರ್ಕಾರಿ ದಾಖಲೆಗಳನ್ನು ಅಕ್ರಮವಾಗಿ ತಿದ್ದಿರುವುದರಿಂದ ಆತನಿಗೆ ಮಂಜೂರಾದ ಸರ್ವೆ ನಂ.127ರ ಸಂಪೂರ್ಣ ಜಮೀನನ್ನು ಕಾನೂನುಪ್ರಕಾರ ರದ್ದುಗೊಳಿಸಿ ಪುನ: ಸರ್ಕಾರದ ಸ್ವಾಧೀನಕ್ಕೆ ಪಡೆಯುವುದು ಅವಶ್ಯಕವಾಗಿರುತ್ತದೆ.

9. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಕುಣಿಗಲ್ ತಾಲ್ಲೂಕು ಚಿಕ್ಕಮಾವತ್ತೂರು ಗ್ರಾಮದ ಸರ್ವೆ ನಂ.127 ರ ಸರ್ಕಾರಿ ಗೋಮಾಳ ಜಮೀನಿನಲ್ಲಿ ಸಿ.ಕೆ.ಸೊಬಗಯ್ಯ ಎಂಬುವವರಿಗೆ ಮಂಜೂರಾದ 1.10 ಎಕರೆ ಜಮೀನನ್ನು 2.10 ಎಕರೆ ಎಂದು ಅಕ್ರಮವಾಗಿ ತಿದ್ದುಪಡಿ ಮಾಡಿಕೊಂಡಿರುವುದರಿಂದ ಆತನಿಗೆ ಮಂಜೂರಾದ ಸರ್ವೆ ನಂ.127ರ ಸಂಪೂರ್ಣ ಜಮೀನನ್ನು ಕಾನೂನುಪ್ರಕಾರ ರದ್ದುಗೊಳಿಸಿ ಪುನ: ಸರ್ಕಾರದ ಸ್ವಾಧೀನಕ್ಕೆ ಪಡೆಯಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ **ನಿರ್ದೇಶನ ನೀಡಲು** ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

10. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 23/6/17

**[ ನ್ಯಾಯಮೂರ್ತಿ ಸುಭಾಷ್ ಬಿ ಅಡಿ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**

23/6